1593 (2104) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಕೊಳಚೆ ಪ್ರದೇಶಗಳು ಇವೆ (ಕೊಳಚೆ ಪ್ರದೇಶವಾರು ವಿವರ ನೀಡುವುದು),

ಆ) ಈ ಪೈಕಿ ಮಂಡಳಿಯು ಯಾವ ಯಾವ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಣೆ ಮಾಡಿದೆ ಹಾಗೂ ಇನ್ನೂ ಎಷ್ಟು ಪ್ರದೇಶಗಳನ್ನು ಘೋಷಣೆ ಮಾಡಬೇಕಾಗಿದೆ,

ಇ) ಈ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಕೊಳಚೆ ನಿವಾಸಿಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆ, (ಪೂರ್ಣ ವಿವರಗಳನ್ನು ಕೊಳಚೆ ಪ್ರದೇಶವಾರು ಒದಗಿಸುವುದು),

ಈ) ಬೆಂಗಳೂರು ನಗರದಲ್ಲಿ ಕೊಳಚೆ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಮಂಡಳಿಯು ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಎಕರೆ ಜಾಗವನ್ನು ಹೊಂದಿದೆ,

ಉ) ಈ ಜಾಗದ ಇಂದಿನ ಮಾರುಕಟ್ಟೆ ಬೆಲೆ ಎಷ್ಟು,

ಊ) ಕೊಳಚೆ ಮಂಡಳಿಗೆ ಸೇರಿದ ಜಾಗದ ಪೈಕಿ ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಪ್ರಮಾಣದ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ (ಒತ್ತುವರಿ ಮಾಡಿ ಕೊಂಡಿರುವವರ ಹೆಸರು ಹಾಗೂ ಭೂಮಿಯ ಪ್ರಮಾಣವನ್ನು ಒದಗಿಸುವುದು),

ಋ) ಈ ಒತ್ತುವರಿಯನ್ನು ತೆರವುಗೊಳಿಸಿ ಮಂಡಳಿಗೆ ಸೇರಿದ ಜಾಗವನ್ನು ವಾಪಸ್ಸು ಪಡೆಯಲು ಕೈಗೊಂಡಿರುವ ಕ್ರಮಗಳೇನು,

ೠ) ಕೊಳಚೆ ಮಂಡಳಿಯ ವತಿಯಿಂದ ನಗರದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ,

ಎ) ಈ ಪೈಕಿ ಎಷ್ಟು ಮನೆಗಳನ್ನು ವಿತರಣೆ ಹಾಗೂ ಇನ್ನೂ ಎಷ್ಟು ಮನೆಗಳು ಖಾಲಿ ಉಳಿದಿವೆ,

ಏ) ಇವುಗಳನ್ನು ವಿತರಣೆ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಬೆಂಗಳೂರು ನಗರದಲ್ಲಿ ಒಟ್ಟು 542 ಕೊಳಚೆ ಪ್ರದೇಶಗಳಿರುತ್ತದೆ ವಿವರಗಳನ್ನು ಅನುಬಂಧ –ಅ ನಲ್ಲಿ ನೀಡಿದೆ (ಹೆಚ್ಚಿನ ಪುಟಗಳು ಇರುವುದರಿಂದ ಮಾನ್ಯ ಸದಸ್ಯರಿಗೆ ಮಾತ್ರ ನೀಡಲಾಗಿದೆ)

ಆ) ಮಂಡಳಿಯು ಇದುವರೆವಿಗೂ 219 ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಮಂಡಳಿಯ ಕಾಯ್ದೆಯಡಿ ಘೋಷಿಸಿದೆ 43 ಕೊಳಚೆ ಪ್ರದೇಶಗಳನ್ನು ಘೋಷಣೆ ಮಾಡುವ ಬಗ್ಗೆ ಪರಿಶೀಲನೆಯಲ್ಲಿದೆ

ಇ) ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಮಳೆನೀರಿನ ಚರಂಡಿ, ಶೌಚಾಲಯ, ವಿದ್ಯುದ್ಧೀಕರಣ, ಸ್ನಾನಗೃಹಗಳನ್ನು ಒದಗಿಸಲಾಗಿದೆ ವಿವರಗಳನ್ನು ಅನುಬಂಧ–ಅ ನಲ್ಲಿ ಒದಗಿಸಲಾಗಿದೆ

ಈ) ಮಂಡಳಿಯು ಬೆಂಗಳೂರು ನಗರದ ಈ ಕೆಳಕಂಡ ಪ್ರದೇಶಗಳಲ್ಲಿ 130 ಎಕರೆ 24 ಗುಂಟೆ ಪ್ರದೇಶವನ್ನು ಹೊಂದಿದೆ

ಕ್ರ.ಸಂ	ಪ್ರದೇಶದ ಹೆಸರು	ವಿಸ್ತೀರ್ಣ	
		ಎಕರೆ	ಗುಂಟೆ
1	ಲಗ್ಗೆರೆ	95	10
2	ಚಿಕ್ಕಬೊಮ್ಮಸಂದ್ರ ಸರ್ವೆ ನಂ 17	4	8
3	ಸರ್ವೆ ನಂ 109 ಸಿಂಗಾಪುರ	5	0
4	ಸಾದರಮಂಗಲ ಸ.ನಂ 53	4	21
5	ಕೂಡ್ಲು ಸ ನಂ 148	20	0

6	ಹನುಮಂತಪುರ ಗ್ರಾಮ ಸರ್ವೆ ನಂ 55/2	1	25

ಉ) ಅಂದಾಜು ರೂ 568 66 ಕೋಟಿ

ಊ) ಮಂಡಳಿಗೆ ಸೇರಿದ 12 ಎಕರೆ 19 ಗುಂಟೆ ಜಮೀನನ್ನು ಈ ಕೆಳಕಂಡ ಸಂಘ ಸಂಸ್ಥೆಗಳು ಒತ್ತುವರಿ ಮಾಡಿಕೊಂಡಿರುತ್ತೇವೆ

ಕ್ರ.ಸಂ	ಪ್ರದೇಶದ ಹೆಸರು	ಒತ್ತುವರಿ ಮಾಡಿಕೊಂಡಿರುವ ಸಂಘ ಸಂಸ್ಥೆಯ ಹೆಸರು	ವಿಸ್ತೀರ್ಣ ಎಕರೆ	ಗುಂಟೆ
1	ಲಗ್ಗೆರೆ ಸ ನಂ 9/1	ಕೆಂಪಮ್ಮ ಕ್ಷೇಮಾಭಿವೃದ್ಧಿ ಬಡಾವಣೆ ಸಂಘ	10	0
2	ಸರ್ವೆ ನಂ 9/2	ಬಸವಲಿಂಗಪ್ಪ ಮತ್ತು ವಿ ನಾಗರಾಜು	0	0 5
3	ಚಿಕ್ಕಬೊಮ್ಮಸಂದ್ರ ಸ ನಂ 17	ಕೆಂಪಣ್ಣ ಮತ್ತು ಇತರರು	2	14

ಋ) ಒಟ್ಟು 12 19 ಎಕರೆ ಜಮೀನು ಒತ್ತುವರಿಯಾಗಿದ್ದು ಈ ಪೈಕಿ 12 14 ಎಕರೆ ಜಮೀನಿಗೆ ವಿವಿಧ ಸಂಘ ಸಂಸ್ಥೆಗಳು ಸಿವಿಲ್ ನ್ಯಾಯಾಲಯಗಳಲ್ಲಿ ದಾವೆ ಹೂಡಿರುತ್ತದೆ ಈ ದಾವೆಗಳನ್ನು ತೆರವುಗೊಳಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ ಈ ಬಗ್ಗೆ ಶ್ರೀ ಎ ಟಿ ರಾಮಸ್ವಾಮಿ, ಜಂಟಿ ಸದನ ಸಮಿತಿಗೆ ವರದಿ ಸಲ್ಲಿಸಿದ್ದು, ಸಮಿತಿಯಿಂದ ಸೂಕ್ತ ನಿರ್ದೇಶನ ಕೋರಲಾಗಿದೆ

ಋೂ) 11716

ಎ) 11464 ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಿದ್ದು, 252 ಮನೆಗಳನ್ನು ಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ

ಏ) ಘೋಷಿತ ಕೊಳಚೆ ಪ್ರದೇಶದ ವಸತಿಹೀನ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ನಂತರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು